ಹೊಯ್ಸಳ ಮಾಲೆ - 8

ಪ್ರೊಫೆಸರ್ ಎ.ಎನ್. ಮೂರ್ತಿರಾಯರು



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

[illegible]

[illegible]

[illegible]
[illegible]
[illegible]

Prof. A.N. Murthyrayaru

Published by : Hoysala Karnataka Sangha
3rd Cross, Hombegowda Nagara, Bangalore - 560 027

© ಹೊಯ್ಸಳ ಕರ್ನಾಟಕ ಸಂಘ (ರಿ), ಬೆಂಗಳೂರು

ಮೊದಲ ಮುದ್ರಣ : ಮಾರ್ಚ್ 2008
ಎರಡನೇ ಮುದ್ರಣ : ಏಪ್ರಿಲ್ 2016

ಬೆಲೆ : ₹ 30/-

ಆಕಾರ ಡೆಮ್ಮಿ : 1/8

ಪುಟಗಳು : 36

ಮುದ್ರಣ ಕಾಗದ : 70 ಜಿಎಸ್‌ಎಂ. ಮ್ಯಾಪ್ಲಿತೊ

ಮುದ್ರಣ :
ಜ್ವಾಲಾಮುಖಿ ಮುದ್ರಣಾಲಯ ಪ್ರೈವೇಟ್ ಲಿಮಿಟೆಡ್
ರಾಷ್ಟ್ರಪ್ರಶಸ್ತಿ ವಿಜೇತರು
44/1, ಕೆ.ಆರ್. ರಸ್ತೆ, ಬಸವನಗುಡಿ, ಬೆಂಗಳೂರು-560 004
ದೂರವಾಣಿ : 080-26608090, 26617243

ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಅವತಾರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳು ನಮ್ಮ ಯುವಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ ಯ ಧ್ಯೇಯ'. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ.ಸತ್ಯನಾರಾಯಣರವರು ಒಂದು ಪುದವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೋ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಕಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ

ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ-ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ.ಗಳಾಗಬಹುದು. (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು.

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕಗಳಲ್ಲಿ ಪ್ರಕಟಿಸಲಾಗುವುದು.

2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರೂ ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.

3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.

4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.

5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ ನೆರವು

ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್. ಸತ್ಯ ಇವರ ಮಕ್ಕಳಾದ ಶ್ರೀಯುತ. ಶಿವಕುಮಾರ್, ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತಮಾಹಿತಿಗಳನ್ನು, ಫೋಟೋಗಳನ್ನ ಸಂಗ್ರಹಿಸಿ ಅಂದವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ಉತ್ಸಾಹದ ಚಿಲುಮೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೋ.ಜಿ.ವೆಂಕಟಸುಬ್ಬಯ್ಯ ರವರಿಗೆ ಸಂಪಾದಕರ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ.ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

ಅರೆಕೆರೆ ಗೌರಿಶಂಕರ
ಅಧ್ಯಕ್ಷರು
ಹೊಯ್ಸಳ ಕರ್ನಾಟಕ ಸಂಘ(ರಿ.)
ಬೆಂಗಳೂರು-27

ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ. ಸತ್ಯನಾರಾಯಣ ಅವರೊಡನೆ ಮಾತನಾಡುತ್ತ ಇದ್ದಾಗ ಅವರು ''ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೊ?'' ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಸಾಧ್ಯವಾದರೆ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ.

'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಣ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಣನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಿಸಣಿಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕರ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು, ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರು ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು ''ಈಗಲಾದರೂ ನಾವು ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ. ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟ ಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ ಒಂದು

ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳಮಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು'' ಎಂದು ನಿರ್ಧಾರವಾಗಿ ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು
3. ಶ್ರೀ ಬಿ.ಜೆ. ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್. ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ ಸದಸ್ಯರು
6. ಶ್ರೀ ಎ.ವಿ. ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್‌ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನು ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲ ಪೂರ್ವಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ

ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ'ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ॥ ಜಿ.ವಿ. ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಜಿ. ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31ನೇ ಕ್ರಾಸ್
7ನೇ ಬ್ಲಾಕ್, ಜಯನಗರ
ಬೆಂಗಳೂರು–560 070.
1–3–2008

ಲೇಖಕಿಯ ಬಿನ್ನಹ

ನನ್ನ ತಂದೆ ಸೂರ್ಯನಾರಾಯಣರಾವ್ (ಮರಿ) ಮೂರ್ತಿರಾಯರ ತಮ್ಮ, ಅಣ್ಣ ತಮ್ಮಂದಿರ ಮಕ್ಕಳಲ್ಲಿ ನಾನು ಕೊನೆಯವಳು.

ದೊಡ್ಡಪ್ಪ ನಮ್ಮ ಮೈಸೂರು ಚಾಮುಂಡೀಪುರಂ ಮನೆಯಲ್ಲಿ ಒಂದೆರಡು ವರ್ಷ ಇದ್ದರು. ಆಗ ಅವರ ಚಟುವಟಿಕೆಗಳನ್ನೂ, ಸ್ವಭಾವವನ್ನೂ ಹತ್ತಿರದಿಂದ ನೋಡುವ ಅವಕಾಶ ಒದಗಿತ್ತು, ಎಷ್ಟೋ ಬಾರಿ ಅವರು ಬೆಳಗಿನ ಜಾವ 4 ಗಂಟೆಗೇ ಎದ್ದು ಬರವಣಿಗೆ ಪ್ರಾರಂಭಿಸುತ್ತಿದ್ದುದ್ದನ್ನು ಕಂಡು ಆಶ್ಚರ್ಯವೆನಿಸುತ್ತಿತ್ತು, ನನ್ನ ಮದುವೆಯಾದ ಮೇಲೂ ಅವರ ಮಕ್ಕಳು, ಮೊಮ್ಮಕ್ಕಳುಗಳ ಜೊತೆ ನಮ್ಮ ಮನೆಗೆ ಆಗಾಗ ಬರುತ್ತಿದ್ದರು.

ಅವರ ಬಗ್ಗೆ ನಾಲ್ಕು ಪಂಕ್ತಿ ಬರೆಯುವ ಸುಯೋಗ ನನ್ನ ಪಾಲಿಗೆ ಬಂದಿರುವುದು ನನಗೆ ತುಂಬಾ ಸಂತೋಷವಾಗಿದೆ. ಈ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಹೊಯ್ಸಳ ಕರ್ನಾಟಕ ಸಂಘಕ್ಕೆ ನನ್ನ ಧನ್ಯವಾದಗಳು.

- ಕುಸುಮ

ಪ್ರೊಫೆಸರ್ ಎ.ಎನ್. ಮೂರ್ತಿರಾಯರು

ಅಕ್ಕಿಹೆಬ್ಬಾಳು ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಒಂದು ಸುಂದರವಾದ ಗ್ರಾಮ.

ಪುರಾತನವಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯವಿದೆ. ಊರಿನಿಂದ ಪೂರ್ವಕ್ಕೆ ಅರ್ಧ ಮೈಲು ನಡೆದರೆ ಹೇಮಾವತಿ ನದಿ.

ಈ ಗ್ರಾಮದ ಬ್ರಾಹ್ಮಣ ಕೇರಿಯಲ್ಲಿದ್ದ 50–60 ಸಂಸಾರಗಳಲ್ಲಿ ಮೂರು–ನಾಲ್ಕು ಹೊರತು, ಉಳಿದವರೆಲ್ಲಾ 'ಹೊಯ್ಸಳ ಕರ್ನಾಟಕ' ಉಪಜಾತಿಗೆ ಸೇರಿದವರು. ಎಲ್ಲ ಮನೆಯವರೂ ಕಾಶ್ಯಪ ಗೋತ್ರದವರು. ಅವರೆಲ್ಲಾ ಬಂಧುಗಳು. ಸ್ಮಾರ್ತ ಸಂಪ್ರದಾಯದವರು.

ಹೊಯ್ಸಳ ಕರ್ನಾಟಕ ಮನೆತನದ ಸುಬ್ಬರಾಯರು ಮತ್ತು ಪುಟ್ಟಮ್ಮ ದಂಪತಿಗಳಿಗೆ ನರಸಿಂಹಮೂರ್ತಿ, ರಾಮಸ್ವಾಮಿ, ಸೂರ್ಯನಾರಾಯಣ, ಕೃಷ್ಣಮೂರ್ತಿ, ವಿಶ್ವೇಶ್ವರ, ಸೀತಮ್ಮ ಎಂಬ ಆರು ಮಕ್ಕಳು. ಹಿರಿಯ ಮಗ ನರಸಿಂಹಮೂರ್ತಿ (ಎ.ಎನ್. ಮೂರ್ತಿರಾಯರು). 16ನೇ ಜೂನ್ 1900ರಂದು ಅಕ್ಕಿಹೆಬ್ಬಾಳದಲ್ಲಿ ಜನಿಸಿದರು.

ಸುಬ್ಬರಾಯರು ನಾಗಮಂಗಲದಲ್ಲಿ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಓವರ್ಸಿಯರ್ ಆಗಿ ಕೆಲಸ ಮಾಡುತ್ತಿದ್ದರು. ಆರೋಗ್ಯ ಹದಗೆಟ್ಟ ಕಾರಣ ಕೆಲಸದಲ್ಲಿ ಮುಂದುವರೆಯಲು ಅವಕಾಶವಿಲ್ಲದೆ, ಅವಧಿಗೆ ಮುನ್ನ ನಿವೃತ್ತಿ ಪಡೆದರು. ಆಗ ಅವರಿಗೆ 7 ರೂ.ಗಳು ಪಿಂಚಣಿ ಬರುತ್ತಿತ್ತು. ಮನೆ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಅನುಭವ ಪಡೆದಿದ್ದ ಪುಟ್ಟಮ್ಮನವರು ಸಂಸಾರವನ್ನು ಯಾವ ನ್ಯೂನತೆ ಇಲ್ಲದೆ ದಕ್ಷತೆಯಿಂದ ಮುಂದುವರೆಸಿಕೊಂಡು ಹೋಗಬಲ್ಲವರಾಗಿದ್ದರು. ಇದಲ್ಲದೆ, ಅಕ್ಕಿಹೆಬ್ಬಾಳಿನಲ್ಲಿ ಸಾಕಷ್ಟು ತರಿ ಜಮೀನು ಇದ್ದಿದ್ದರಿಂದ ಜೀವನ ಮುಂದುವರೆಸಲು ಯಾವ ತೊಂದರೆಯೂ ಇರಲಿಲ್ಲ.



ಪ್ರೊಫೆಸರ್ ಎ.ಎನ್. ಮೂರ್ತಿರಾಯರು

ಆ ಕಾಲದಲ್ಲಿ ಅಕ್ಕಿಹೆಬ್ಬಾಳಿನಲ್ಲಿ ವಿದ್ಯಾಭ್ಯಾಸಕ್ಕೆ ಸೌಕರ್ಯವಿರಲಿಲ್ಲ. ಆದ್ದರಿಂದ ಮೂರ್ತಿರಾಯರನ್ನು ಹತ್ತಿರದ ಸಂಬಂಧಿ ಮೈಸೂರಿನ ತರಿಗೆ ಸುಬ್ಬಯ್ಯನವರ ಮನೆಯಲ್ಲಿ ಬಿಟ್ಟರು. ವೆಸ್ಲಿಯರ್ ಮಿಷನ್ ಸ್ಕೂಲಿಗೆ ಸೇರಿಸಿದರು.

ಸ್ವಲ್ಪ ಕಾಲಾನಂತರ ಸುಬ್ಬರಾಯರು ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಆಗುವಂತೆ ಸಂಸಾರ ಸಮೇತ ಮೈಸೂರಿಗೆ ಬಂದು ಕೊತ್ವಾಲ ರಾಮಪ್ಪನವರ ಬೀದಿಯಲ್ಲಿ ಸ್ವಂತಮನೆ ಮಾಡಿಕೊಂಡು ವಾಸಮಾಡಲು ಪ್ರಾರಂಭ ಮಾಡಿದರು.

ವಿವಾಹ

ಹೈಸ್ಕೂಲ್ ವಿದ್ಯಾಭ್ಯಾಸವನ್ನು ಮೈಸೂರಿನ ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಮುಗಿಸಿ ಎಂಟ್ರೆನ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಆಗ ಅವರಿಗೆ 18 ವರ್ಷ. 1918ರಲ್ಲಿ ಕೋಲಾರದಲ್ಲಿ ಡಿಸ್ಟ್ರಿಕ್ಟ್ ಟ್ರೆಷರಿ ಆಫೀಸರ್ ಆಗಿದ್ದ ಸೂರ್ಯನಾರಾಯಣಪ್ಪನವರ ಎರಡನೇ ಮಗಳು ಎಂಟು ವರ್ಷದ ಜಯಲಕ್ಷ್ಮಮ್ಮನವರೊಂದಿಗೆ ವಿವಾಹವಾಯಿತು.

ಮೂರ್ತಿರಾಯರು ಹೈಸ್ಕೂಲಿನಲ್ಲಿ ಕೆಲಸಕ್ಕೆ ಸೇರುವುದಕ್ಕೆ ಸ್ವಲ್ಪ ಮುಂಚೆ ಜಯಲಕ್ಷ್ಮಿ ತವರು ಮನೆಯನ್ನು ಬಿಟ್ಟು ಗಂಡನ ಮನೆಗೆ ಬಂದರು. ಆಗ ಅತ್ತೆ ಪುಟ್ಟಮ್ಮ, ಅವರತ್ತೆ ಭಾಗೀರತಮ್ಮ ಇಬ್ಬರೂ, ''ಮಹಾಲಕ್ಷ್ಮಿ ಬಂದ ಹಾಗೆ ಬಂದೆಯಮ್ಮ; ನಿನ್ನ ಪುಣ್ಯದಿಂದ ಅವನಿಗೆ ಕೆಲಸ ಸಿಕ್ಕಿತು. ನಮ್ಮ ಮನೆ ಬೆಳಕಾಯಿತು!'' ಎಂದು ಆವಳನ್ನು ಹೊಗಳಿದರು. ಆಕೆ ಬಹುಬೇಗ ಅತ್ತೆಗೆ ಮೆಚ್ಚಿನ ಸೊಸೆಯಾದಳು.

ಜಯಮ್ಮನವರು ಅತಿ ವಿಶ್ವಾಸಿ. ಅಜ್ಜಿ, ಅತ್ತೆ ಅವರುಗಳೊಡನೆ ಹೊಂದಿಕೊಂಡಿರುತ್ತಿದ್ದರು. ಮೈದುನರನ್ನು ಸ್ವಂತ ಅಣ್ಣತಮ್ಮಂದಿರಂತೆ ಭಾವಿಸಿ ಸಲಿಗೆಯಿಂದ ಇರುತ್ತಿದ್ದರು. ಯಾವತ್ತೂ ಅವರುಗಳನ್ನು ಕಠಿಣವಾಗಿ ಮಾತನಾಡಿಸಿದವರಲ್ಲ.

ಒಂದು ದಿನ ಅಜ್ಜಿ ಭಾಗೀರತಮ್ಮ ಮತ್ತು ಅತ್ತೆ ಪುಟ್ಟಮ್ಮನವರೊಡನೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಮೂರ್ತಿರಾಯರು ಬಂದು, ''ಜಯಮ್ಮ ಗಾಣದೆತ್ತು ಎಂದು ತಿಳಿದುಕೊಂಡು ಕೆಲಸ ಮಾಡಿಸುತ್ತಿದ್ದೀರಾ?'' ಎಂದು ಕೇಳಿದರು. ಕೂಡಲೇ ಜಯಮ್ಮ ಗಂಡನ ಸಮೀಪ ಬಂದು, ''ಮನೆ ಕೆಲಸಗಳಲ್ಲಿ



ಪ್ರೊಫೆಸರ್ ಎ.ಎನ್. ಮೂರ್ತಿರಾಯರು

ನೀವು ಪ್ರವೇಶ ಮಾಡುವುದು ಸರಿಯಲ್ಲ; ಮನೆ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುವವಳು ನಾನು ಮತ್ತು ಇದು ಅತ್ಯಗತ್ಯ'' ಎಂದು ಹೇಳಿದರು. ಇದನ್ನು ಕೇಳಿ ರಾಯರು ನಕ್ಕು ಒಳಕ್ಕೆ ಹೋದರು.

ಉನ್ನತ ವಿದ್ಯಾಭ್ಯಾಸ

ತಿಂಗಳಿಗೆ 12 ರೂಪಾಯಿ ಸಬ್ಜೆಕ್ಟ್ ಸ್ಕಾಲರ್‌ಷಿಪ್ ನೆರವಿನೊಂದಿಗೆ ಮೈಸೂರಿನ ಮಹಾರಾಜ ಕಾಲೇಜನಿನಲ್ಲಿ ಬಿ.ಎ.ಗೆ ಸೇರಿದರು. ಆಗ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಜೆ.ಸಿ. ರಾಲೋರವರ ಮೆಚ್ಚಿನ ವಿದ್ಯಾರ್ಥಿಯಾದರು. ಮೂರನೇ ವರ್ಷದ ಪರೀಕ್ಷೆ ಬರೆಯಲು ಸಿದ್ಧರಾಗುತ್ತಿದ್ದಾಗ ಸುಬ್ಬರಾಯರು ವಿಧಿವಶರಾದರು. ತಂದೆಯ ಅಂತ್ಯಕ್ರಿಯೆಗಳನ್ನು ಮುಗಿಸಿ ವೈಕುಂಠ ಸಮಾರಾಧನೆಯ ಸಂಜೆಯೇ ಮೈಸೂರಿಗೆ ಹೊರಟರು. ಮಾರನೆಯ ದಿನವೇ ಬಿ.ಎ. ಪರೀಕ್ಷೆ! ಆ ಪರೀಕ್ಷೆಯಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದರು.

ನಂತರ ಇಂಗ್ಲಿಷ್ ಎಂ.ಎ.ಗೆ ಸೇರಿಕೊಂಡರು. ಎರಡನೇ ವರ್ಷದಲ್ಲಿದ್ದಾಗ ಪ್ರೊ|| ರಾಲೋ ಆರು ತಿಂಗಳು ರಜೆ ತೆಗೆದುಕೊಂಡು ಇಂಗ್ಲೆಂಡಿಗೆ ಹೊರಟರು. ಇಂಥ ಸಂದರ್ಭಗಳಲ್ಲಿ ರಜ ಪಡೆದವರ ಸ್ಥಾನಕ್ಕೆ ಹಂಗಾಮಿಯಾಗಿ 'ಟ್ಯೂಟರ್' ಸ್ಥಾನಕ್ಕೆ ಎಂ.ಎ. ಕ್ಲಾಸಿನಲ್ಲಿ ಹೆಚ್ಚು ನಂಬರು ಗಳಿಸಿದ್ದವರನ್ನು ನೇಮಿಸುತ್ತಿದ್ದರು. ಆಗ ಮೂರ್ತಿರಾಯರಿಗೆ ಆ ಕೆಲಸ ಸಿಕ್ಕಿತು. ಎಂ.ಎ.ನಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆಯಾಯಿತು.

1925–27ರವರೆಗೆ ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಈ ಸಮಯದಲ್ಲಿ ಇವರಿಗೆ ದೊರೆತ ದೊಡ್ಡ ಭಾಗ್ಯವೆಂದರೆ ಇಬ್ಬರು ಮಹನೀಯರ ಸ್ನೇಹ. ಒಬ್ಬರು ಎಂ. ಸ್ವಾಮಿನಾಥನ್; ಅವರು ತರ್ಕಶಾಸ್ತ್ರ ಬೋಧಿಸುತ್ತಿದ್ದರು. ಮತ್ತೊಬ್ಬರು ರಾಳ್ಳಪಲ್ಲಿ ಅನಂತಕೃಷ್ಣಶರ್ಮ. ತೆಲುಗು ಪಂಡಿತರಾಗಿದ್ದ ಇವರು ಸಂಗೀತ ವಿದ್ವಾಂಸರೂ ಆಗಿದ್ದರು.

ಪ್ರಭಾವ ಬೀರಿದ ಹಿರಿಯರು

ಡಿ.ಎನ್. ಮೂರ್ತಿಯವರು

ಮೂರ್ತಿರಾಯರಿಗೆ ಇಂಗ್ಲಿಷ್ ಜ್ಞಾನವನ್ನೂ, ಸಾಹಿತ್ಯಾಭಿರುಚಿಯನ್ನು ಬೆಳೆಸಿದವರು ವೆಸ್ಲಿಯನ್ ಮಿಷನ್ ಹೈಸ್ಕೂಲ್ ಅಧ್ಯಾಪಕರಾಗಿದ್ದ ಡಿ.ಎನ್. ಮೂರ್ತಿಯವರು ಮತ್ತು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಪ್ರೊ|| ರಾಲೊರವರು.

ಒಮ್ಮೆ ಡಿ.ಎನ್. ಮೂರ್ತಿಯವರು ತರಗತಿಯಲ್ಲಿ ತಮ್ಮ ಶಿಷ್ಯರ ಇಂಗ್ಲಿಷ್ ಭಾಷೆಯನ್ನು, ಅದರ ಮೇಲಿನ ಹಿಡಿತವನ್ನು ಪರೀಕ್ಷಿಸುವ ಸಲುವಾಗಿ ''ನೀವು ಓದಿರುವ ಯಾವುದಾದರೂ ಕತೆಯನ್ನು ನಿಮಗೆ ತೋಚುವ ರೀತಿಯಲ್ಲಿ ಬರೆಯಿರಿ'' ಎಂದರು. ಆಗ ಮೂರ್ತಿರಾಯರು 'ಯೂಲಿಸಿಸ್' ಎಂಬ ಕತೆಯನ್ನು ಬರೆದುಕೊಂಡು ಹೋದರು. ಅದನ್ನು ಓದಿದ ಅವರ ಗುರುಗಳು ಸಿಡಿದು ಕೋಪಗೊಂಡು ನೀನು ಆ ಕತೆಯನ್ನು ಬರೆದೇ ಇಲ್ಲ; ಬೇರೆ ಯಾರ ಕೈಲೋ ಬರೆಸಿಕೊಂಡು ಬಂದಿರುವೆ ಎಂದು ಬೈದರು. ಆದರೆ ಮೂರ್ತಿಯವರು ತಾವೇ ಬರೆದಿದ್ದು ಎಂದು ಹೇಳಿದರು. ಇದನ್ನು ನಂಬಲು ಡಿ.ಎನ್. ಮೂರ್ತಿಯವರು ತನ್ನೆದುರಿಗೇ ಮೂರ್ತಿರಾಯರಿಗೆ ಕತೆ ಬರೆಯಲು ಹೇಳಿದರು. ಆಗ ಮೂರ್ತಿರಾಯರ 'ಲಿಲಿಪುಟ್ಸ್–ಗಲಿವರ್' ಕತೆ ಓದಿ 'I think you are not lying' ಎಂದರು. ಈ ಪ್ರಸಂಗದ ನಂತರ ಸಾಹಿತ್ಯ ವ್ಯಾಸಂಗದಲ್ಲಿ ಅವರ ಮಾರ್ಗದರ್ಶನ ದೊರೆಯಿತು.

ಡಾ|| ರಾಧಾಕೃಷ್ಣನ್

ಮೂರ್ತಿರಾಯರು ಕಾಲೇಜಿಗೆ ಸೇರಿದಾಗ ತತ್ವಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡಿದ್ದರು. ಅದಕ್ಕೆ ಕಾರಣವೇನೆಂದರೆ ತತ್ವಶಾಸ್ತ್ರದ ಬಗ್ಗೆ ಅವರಿಗಿದ್ದ ಆಸಕ್ತಿಯಲ್ಲ; ಆ ವಿಷಯವನ್ನು ರಾಧಾಕೃಷ್ಣನ್ ತೆಗೆದುಕೊಳ್ಳುತ್ತಿದ್ದರೆಂದು!

ತತ್ವಶಾಸ್ತ್ರ ಕಠಿಣವಾದ ವಿಷಯ. ಕಬ್ಬಿಣದ ಕಡಲೆ. ಆದರೆ ಮೂರ್ತಿರಾಯರಿಗೆ ಈ ವಿಷಯ ರಾಧಾಕೃಷ್ಣನ್‌ರ ಕೈವಾಡದಿಂದ ಸಂಪೂರ್ಣ

ಕರಗತವಾಗುತ್ತಿತ್ತು. ಈ ಕಾರಣದಿಂದಲೇ ರಾಧಾಕೃಷ್ಣರನ್ನು ಕಂಡರೆ ಶಿಷ್ಯಸಮೂಹಕ್ಕೆ ಭಕ್ತಿ, ಗೌರವ.

ಆಗ, ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳನ್ನು ಎಸ್.ಎಸ್. ಸುಬ್ಬರಾಯರು ಬೋಧಿಸುತ್ತಿದ್ದರು. ಮೂರ್ತಿರಾಯರು ಸುಬ್ಬರಾಯರ ಶಿಷ್ಯರಾಗಬೇಕೆಂಬ ಕಾರಣದಿಂದ ಈ ವಿಷಯಗಳನ್ನು ಅಧ್ಯಯನ ಮಾಡಿದರು. ಆದರೆ ಅರ್ಥಶಾಸ್ತ್ರ ಮಾತ್ರ ಸರಿಯಾಗಿ ಕಲಿಯಲು ಸಾಧ್ಯವಾಗಲಿಲ್ಲ.

ಜೆ.ಸಿ. ರಾಲೋ

ಮೂರ್ತಿರಾಯರಿಗೆ ಸಾಹಿತ್ಯಾಭಿರುಷಿ ಬೆಳೆಸಿದವರ ಪೈಕಿ ಅವರ ಗುರುಗಳು ಜೆ.ಸಿ. ರಾಲೋರವರಿಗೇ ಪ್ರಥಮ ಸ್ಥಾನ ಸಲ್ಲುತ್ತದೆ. ಗ್ರೀಕ್, ಲಾಟಿನ್ ಭಾಷೆಗಳಲ್ಲೂ ಪಾಂಡಿತ್ಯ ಇದ್ದ ರಾಲೋರವರು ಆಲೋಚನಾಪರರು; ಉತ್ತಮ ವಾಗ್ಮಿಗಳೂ ಹೌದು. ವಿದ್ಯಾರ್ಥಿಗಳ ಪ್ರೀತಿ ವಿಶ್ವಾಸ ಸಂಪಾದಿಸಲು ಬೇಕಾಗಿರುವ ಹಾಸ್ಯ ಮನೋಧರ್ಮ ಅವರಲ್ಲಿ ಮನೆಮಾಡಿತ್ತು. ಕನ್ನಡ ಭಾಷೆಯ ಏಳಿಗೆ ಕಂಡು ಅವರಿಗೆ ಸಂತೋಷವಾಗಿತ್ತು. ಮೂರ್ತಿರಾಯರು 'ಆಷಾಢಭೂತಿ' ನಾಟಕವನ್ನು ಪ್ರಕಟಿಸಿದಾಗ, ಮೂಲ ಫ್ರೆಂಚ್ ನಾಟಕದಿಂದ ಆದ ಬದಲಾವಣೆಯನ್ನು ಕೇಳಿ, ನಮ್ಮ ಕನ್ನಡ ರಂಗಸ್ಥಳದಲ್ಲಿ ಅದು ಹೇಗೆ ಮಾರ್ಪಾಟಾಗಿದೆ ಎಂಬುದಾಗಿ ಕೇಳಿ ತಿಳಿದುಕೊಂಡಿದ್ದರು.

ಬಿ.ಎಂ. ಶ್ರೀಕಂಠಯ್ಯನವರು

ಬಿ.ಎಂ.ಶ್ರೀ ಆಂಗ್ಲ ಸಾಹಿತ್ಯದ ಪ್ರಾಧ್ಯಾಪಕರಾಗಿದ್ದರು. ಇವರು ಬರೀ ಪ್ರವಚನಗಳಲ್ಲೇ ತಮ್ಮ ಕಾಲ ಕಳೆಯದೆ ಕನ್ನಡ ನಾಡಿನಲ್ಲೆಲ್ಲಾ ಸುತ್ತಾಡಿ ಎಲ್ಲರೊಡನೆ ಬೆರೆತು ಒಂದಾಗಿದ್ದರು. ಇವರ ಉತ್ಸಾಹದಿಂದ ಬಹಳಷ್ಟು ಜನ ಪ್ರೇರಿತರಾಗಿದ್ದಾರೆ. ಆ ಉತ್ಸಾಹದ ಪ್ರಭಾವ ಮೂರ್ತಿರಾಯರ ಮೇಲೆ ಬೀರಿತು. ಇದರಿಂದ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಯುಗವೇ ಆರಂಭವಾಯಿತು ಎನ್ನಬಹುದು.

ತೀ.ನಂ. ಶ್ರೀಕಂಠಯ್ಯನವರು

1929ರಲ್ಲಿ ಅಧ್ಯಾಪಕರಾಗಿ ಮೂರ್ತಿರಾಯರು ಮಹಾರಾಜ ಕಾಲೇಜಿಗೆ ಸೇರಿದರು. ಸುಮಾರು ಹನ್ನೊಂದು ವರ್ಷಗಳ ಕಾಲ ಅಲ್ಲಿ ತೀ.ನಂ.ಶ್ರೀ.ಯವರ ಸಹೋದ್ಯೋಗಿ ಆಗಿದ್ದರು. ಇದರಿಂದ ಅವರುಗಳು ಆಪ್ತರಾದರು. 1940ರಲ್ಲಿ ಮೂರ್ತಿರಾಯರಿಗೆ ಶಿವಮೊಗ್ಗಕ್ಕೆ ವರ್ಗಾವಣೆ ಆಯಿತು.

ವಾರಕ್ಕೆರಡು ಬಾರಿಯಾದರೂ ಕಾಗದಗಳನ್ನು ಬರೆಯುತ್ತಿದ್ದರು. ಈ ಕಾಗದಗಳನ್ನು ಶ್ರೀಕಂಠಯ್ಯನವರು ಜೋಪಾನವಾಗಿ ಇಟ್ಟಿರುತ್ತಿದ್ದರು. ತೀ.ನಂ.ಶ್ರೀ. ತೀರಿಕೊಂಡ ಮೂರು ವರ್ಷಗಳ ಮೇಲೆ ಅವರು ಮಗ ಶ್ರೀ ನಾಗಭೂಷಣ ಆ ಪತ್ರಗಳನ್ನು ಮೂರ್ತಿರಾಯರಿಗೆ ಕಳುಹಿಸಿದರು. ಈ ಪತ್ರಗಳೇ 'ಚಿತ್ರಗಳು–ಪತ್ರಗಳು' ಎಂಬ ಅವರ ಕೃತಿಯಲ್ಲಿ ನಮಗೆ ಸಿಗುವುದು. ಈ ಪುಸ್ತಕದಲ್ಲಿ 'ಚಿತ್ರಗಳು' ಭಾಗದಲ್ಲಿ ಮೂರ್ತಿರಾಯರು ತಮ್ಮ ಗುರುಹಿರಿಯರನ್ನು ಕುರಿತು ಲೇಖನಗಳನ್ನು ಬರೆದಿರುವರು. ಎ.ಆರ್. ಕೃಷ್ಣಶಾಸ್ತ್ರಿಗಳು, ಟಿ.ಎಸ್. ವೆಂಕಣ್ಣಯ್ಯನವರು, ಎಂ. ಆರ್. ಶ್ರೀನಿವಾಸಮೂರ್ತಿಗಳು, ಡಿ.ವಿ. ಗುಂಡಪ್ಪನವರು ಗುರು ಸ್ಥಾನೀಯರಾದವರಾಗಿದ್ದರು.

ವೃತ್ತಿ ಜೀವನ

ಮೂರ್ತಿರಾಯರು ಮಹಾರಾಜ ಕಾಲೇಜಿನಲ್ಲಿ ಸುಮಾರು ಹದಿಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1931ರಲ್ಲಿ ಮೋಲಿಯೇರ್ ಎಂಬ ಫ್ರೆಂಚ್‌ನ ಪ್ರಸಿದ್ಧ ಹಾಸ್ಯನಾಟಕಕಾರ ರಚಿಸಿದ 'ತಾರ್ತುಫ್' ಎಂಬ ನಾಟಕದ ಆಧಾರದ ಮೇಲೆ 'ಆಷಾಢಭೂತಿ' ನಾಟಕ ಬರೆದು ಪ್ರಕಟಿಸಿದರು. 'ಸುಬ್ಬಾಶಾಸ್ತ್ರಿ' ಎಂಬ ಚಲನಚಿತ್ರವೂ ಈ ನಾಟಕದಿಂದ ರೂಪುಗೊಂಡಿತು.

1934–35ರಲ್ಲಿ ಮೈಸೂರಿನ ಒಂಟಿಕೊಪ್ಪಲ್ ಬಡಾವಣೆಯಲ್ಲಿ ಮನೆ ಕಟ್ಟಿದರು. ಈ ಕೆಲಸಕ್ಕೆ ನೆರವಾದ ಜಿ. ಹನುಮಂತರಾಯರನ್ನು ತುಂಬು ಹೃದಯದಿಂದ ನೆನೆಯುತ್ತಿದ್ದರು.

1940ರಲ್ಲಿ ಬಡ್ತಿ ಸಿಕ್ಕಿ ಶಿವಮೊಗ್ಗಕ್ಕೆ ವರ್ಗವಾಯಿತು. 1927ರಲ್ಲಿ ಅವರು ಹಿರಿಯ ಮಗ ಸುಬ್ಬರಾಮುವಿನ ಜನನ. 1929ರಲ್ಲಿ ಎರಡನೇ ಮಗ ನಾಗರಾಜ, 1941ರಲ್ಲಿ ಶಿವಮೊಗ್ಗದಲ್ಲಿ ಕೊನೆಯ ಮಗ ರಾಮಚಂದ್ರ ಹುಟ್ಟಿದರು.

1937ರಲ್ಲಿ ಇವರ 'ಹಗಲುಗನಸುಗಳು' ಎಂಬ ಲಲಿತ ಪ್ರಬಂಧದ ಪುಸ್ತಕ ಪ್ರಕಟವಾಯಿತು. ಈ ಪುಸ್ತಕವನ್ನು ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಪಠ್ಯಪುಸ್ತಕ ಸಮಿತಿಯವರು ಬಿ.ಎ., ಬಿ.ಎಸ್.ಸಿ. ತರಗತಿಗಳಿಗೆ ಪಠ್ಯಪುಸ್ತಕವಾಗಿ ನಿಯಮಿಸಿದ್ದರು.

ನಲವತ್ತರ ದಶಕದ ಆದಿಭಾಗದಲ್ಲಿ ಆಕಾಶವಾಣಿಯ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಸೇರಿದರು. ಒಮ್ಮೆ ಪಿಟೀಲುವಾದಕ ಶ್ರೀ ಟಿ.ಎಸ್. ತಾತಾಚಾರ್ಯರು ಮೂರ್ತಿರಾಯರನ್ನು ನೋಡಲು ಮನೆಗೆ ಹೋಗಿದ್ದರು. ಆಗ ಮೂರ್ತಿರಾಯರು ಹಾಡೊಂದನ್ನು ಗುನುಗುತ್ತಿದ್ದರು. ಅವರು ಒಂದು ನಿಮಿಷ ಕೇಳಿ ಒಳಕ್ಕೆ ಬಂದು, "ನೀವು ಸಂಗೀತ ಏಕೆ ಕಲಿಯಬಾರದು ರಾಯರೇ? ನೋಡಿ; ಕಲಿಯುವುದಾದರೆ ಹೇಳಿಕೊಡುವೆ" ಎಂದರು. ಈ ಉದಾರವಾದ ಸಲಹೆಯನ್ನು ಸಂತೋಷದಿಂದ ಉಪಯೋಗಿಸಿಕೊಂಡು ಐದಾರು ಕೃತಿಗಳನ್ನು ಬಾಯಿಪಾಠ ಮಾಡಿಕೊಂಡಿದ್ದರು.

1944–45 ಸುಮಾರಿನಲ್ಲಿ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಎಂಬ ಕಾದಂಬರಿಯನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದರು. ಇದೇ 'ರಿಟರ್ನ್ ಟು ದ ಸಾಯಿಲ್' ಎಂದು ಪ್ರಕಟವಾಗಿದೆ. (Return to the soil) 1947ರಲ್ಲಿ ಆಕಾಶವಾಣಿಯಿಂದ ವಿಶ್ವವಿದ್ಯಾಲಯಕ್ಕೆ ವಾಪಸಾದರು.

1949ರಲ್ಲಿ ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಒಬ್ಬರು ರಜ ತೆಗೆದುಕೊಂಡು ಇಂಗ್ಲೆಂಡಿಗೆ ಹೋದರು. ಆಗ ರಾಯರು ಬೆಂಗಳೂರಿಗೆ ಬಂದು ಆ ಸ್ಥಾನಕ್ಕೆ ಹಂಗಾಮಿ ಪ್ರೊಫೆಸರ್ ಆಗಿ ನೇಮಕಗೊಂಡರು. ಆಗ ಅವರಿಗಿನ್ನೂ ಐದು ವರ್ಷ ಸೇವಾವಧಿ ಉಳಿದಿತ್ತು.

1951ರ ಸಮಯದಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಪ್ರೊಫೆಸರ್ ಹುದ್ದೆ ಖಾಲಿ ಇದ್ದಿದ್ದರಿಂದ ಅರ್ಜಿ ಆಹ್ವಾನ ಮಾಡಲಾಗಿತ್ತು, ಇದು ಖಾಯಂ ಸ್ಥಾನವಾದ್ದರಿಂದ ಮೂರ್ತಿರಾಯರು ಅರ್ಜಿ ಸಲ್ಲಿಸಿದರು. ಮುಖಾಮುಖಿ ಸಂದರ್ಶನದಲ್ಲಿ ಸಂದರ್ಶನ ಮಾಡುತ್ತಿದ್ದವರು ಇವರನ್ನು ಕನ್ನಡದ ಸಾಹಿತಿ ಎಂದು ಗುರುತಿಸಿಕೊಂಡರು. ಏನು ನಡೆಯಿತೊ!? ಆ ಹುದ್ದೆ ಸಿಕ್ಕಲಿಲ್ಲ ರಾಯರಿಗೆ.

ಇದರಿಂದ ಮೂರ್ತಿರಾಯರಿಗೆ ಬೇಸರವಾದರೂ ಆತ್ಮವಿಶ್ವಾಸ ಕಡಿಮೆಯಾಗಲಿಲ್ಲ. ಆ ಸಮಯದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರಿಗೆ ಈ ಪ್ರಕರಣ ತಿಳಿದುಬಂತು. ಆಗ ಅವರು

ಸೊಸೆ ಲೀಲಾ, ಮಗ ಸುಬ್ಬರಾಮಯ್ಯ, ತಮ್ಮ ಸೂರ್ಯನಾರಾಯಣರಾವ್, ಶಾರದಮ್ಮ
ತಮ್ಮನ ಬೀಗರಾದ ಜಯಲಕ್ಷ್ಮಿ, ವೆಂಕಟರಾಮಾಶಾಸ್ತ್ರಿಗಳೊಂದಿಗೆ



ಚುಂಚನಕಟ್ಟೆ ಧನುಷ್ಕೋಟಿ ಬಳಿ ಬಂಧುಗಳೊಡನೆ

ಹೊಸದೊಂದು ಪ್ರೊಫೆಸರ್ ಹುದ್ದೆ ಸೃಷ್ಟಿಸಿ, ಅದರಲ್ಲಿ ಇವರನ್ನು ಖಾಯಂ ಮಾಡಿದರು. 1955ರಲ್ಲಿ ನಿವೃತ್ತಿಯಾದರು.

ಕುವೆಂಪುರವರು ರಾಯರ 'ಹವಳದ ದ್ವೀಪ' ಪುಸ್ತಕವನ್ನು ಲೋವರ್ ಸೆಂಕಡರಿ ಪರೀಕ್ಷೆಗೆ ಕನ್ನಡ ಪಠ್ಯಪುಸ್ತಕವನ್ನಾಗಿ ಗೊತ್ತುಮಾಡಿದರು. ಇದರ ಪ್ರಕಟಣೆಯಿಂದ ಗೌರವಧನವಾಗಿ ಒಂಬತ್ತು ಸಾವಿರ ರೂಪಾಯಿಗಳು ಬಂದಿತು. ಈ ಸಮಯದಲ್ಲಿ ಒಂದು ಕಾರನ್ನು ಖರೀದಿಸಿದರು; ಮನೆಯ ಸಾಲವೆಲ್ಲಾ ತೀರಿಸಿದರು.

ನಿವೃತ್ತಿ ಹೊಂದಿದ ಮೇಲೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ಡೈರೆಕ್ಟರ್ ಆಗಿ ಕೆಂಗಲ್ ಹನುಮಂತಯ್ಯನವರು ರಾಯರನ್ನು ನೇಮಿಸಿದರು. 1954–56ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಕೆಲಕಾಲ ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಕನ್ವೀನರ್–ಚೇರಮನ್ ಆಗಿ ಕೆಲಸ ಮಾಡಿದರು.

ಮೂರ್ತಿರಾಯರ ಕುಟುಂಬ

ಮೂರ್ತಿರಾಯರಿಗೆ ಮೂರು ಜನ ಗಂಡುಮಕ್ಕಳು. ಮೊದಲನೆ ಮಗ ಸುಬ್ಬರಾಮಯ್ಯ. ಇಂಜಿನಿಯರ್. ಇವರು ಭಾರತ್ ಹೆವಿ ಎಲೆಕ್ಟ್ರಿಕಲ್ ಕಂಪನಿಯಿಂದ ವಿಶೇಷ ತರಬೇತಿಗಾಗಿ ಇಂಗ್ಲೆಂಡಿಗೆ ಹೋಗಿಬಂದರು. ನಂತರ ಭೂಪಾಲ್‌ನಲ್ಲಿ ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸಿದರು. ಕೆಲವು ವರ್ಷಗಳ ಕಾಲ ಇಂಗ್ಲೆಂಡ್ ಹಾಗೂ ಆಫ್ರಿಕಾದ ನೈರೋಬಿಯಲ್ಲಿಯೂ ಇದ್ದರು. ಕಂಪನಿಯ ಮುಖ್ಯ ಇಂಜಿನಿಯರಾಗಿ ಕೆಲಸಮಾಡಿ ಭಾರತಕ್ಕೆ ಹಿಂದಿರುಗಿದರು.

ಎರಡನೆಯವರು ನಾಗರಾಜ್. ಇವರು ಕೃಷಿ ವಿಜ್ಞಾನಿ. ಅಮೇರಿಕಾ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದು ನಂತರ 1963ರಲ್ಲಿ ಕೃಷಿ ತಜ್ಞರಾಗಿ ಸಂಯುಕ್ತ ರಾಷ್ಟ್ರಗಳ (U.N.) FAOಗೆ ನೇಮಕಗೊಂಡು ಫಿಲಿಪೀನ್ಸ್ ದೇಶದಲ್ಲಿ ಇದ್ದರು. ಈಗ ತೀರ್ಥಹಳ್ಳಿಯಲ್ಲಿ ನೆಲೆಸಿದ್ದಾರೆ.

ರಾಮಚಂದ್ರರಾವ್ ಮೂರನೆಯವರು. ವೈದ್ಯರು. ಅಮೇರಿಕದಲ್ಲಿ ನೆಲೆಸಿದ್ದಾರೆ.

ಪತ್ನಿ ವಿಯೋಗ

ಜಯಮ್ಮನವರಿಗೆ ಡಯಾಬಿಟಿಸ್ ಬಿಟ್ಟರೆ ಬೇರೆ ಖಾಯಿಲೆಗಳು ಇರಲಿಲ್ಲ. ಆದರೂ ಅವರ ಆರೋಗ್ಯ ಸರಿ ಇರಲಿಲ್ಲ. ಕಿರಿಯ ಮಗ ರಾಮಚಂದ್ರ ವಿದೇಶಕ್ಕೆ ಹೋದ ಒಂದು ತಿಂಗಳಿನಲ್ಲೇ ಆಕೆಗೆ ಆರೋಗ್ಯ ಕ್ಷೀಣಿಸಿತು. ಜುಲೈ 26, 1964ರಂದು ಮನೆಗೆ ಮನೆದೇವರಂತಿದ್ದ ಜಯಮ್ಮನವರು ನಿಧನರಾದರು.

ಅವರು ಸಾಯುವುದಕ್ಕೆ ಹಿಂದಿನ ವರ್ಷ ನವರಾತ್ರಿಯ ರಜೆಗೆ ಮೂರ್ತಿರಾಯರ ತಮ್ಮ ಕಿಟ್ಟು (ಕೃಷ್ಣಮೂರ್ತಿ) ಬಂದಿದ್ದಾಗ ಮೂರ್ತಿರಾಯರು ತುಂಟ ಚೇಷ್ಟೆಯಿಂದ ಜಯಮ್ಮರನ್ನು ಕರೆದುಕೊಂಡು ಹೋಗಿ ಕುರ್ಚಿಯಲ್ಲಿ ಕೂರಿಸಿ, ''ಕಿಟ್ಟು, ಅರಿಶಿಣ, ಕುಂಕುಮ, ಹೂ ತಗೊಂಡು ಬಾ; ಇಂದು ಮಂದೇವರ ಪೂಜೆ; ಇವಳನ್ನು ಕೂರಿಸಿ ಪೂಜೆ ಮಾಡೋಣ'' ಎಂದಿದ್ದರಂತೆ! ಆಗ ಆಕೆಯ ಮೈದುನ ಕಿಟ್ಟು, ''ಹೌದು ಅತ್ತಿಗೆಮ್ಮ ಕೂತುಕೊಳ್ಳಿ; ನಮ್ಮ ಮನೆತನಕ್ಕೆ ನೀವೇ ಮನೆದೇವರು'' ಎಂದು ಹೇಳಿದ್ದರಂತೆ. ಈ ಮನೆದೇವರ ವಿಯೋಗದಿಂದ ಮೂರ್ತಿರಾಯರು ಬಹಳ ನೊಂದಿದ್ದರು.

ವಿದೇಶ ಪ್ರಯಾಣದ ಅನುಭವಗಳು

ಇಂಥ ಸಂದರ್ಭದಲ್ಲಿ ಮೂರ್ತಿರಾಯರನ್ನು ಅವರ ಮಗ ನಾಗರಾಜ ಫಿಲಿಪೀನ್ಸ್‌ಗೆ ಕರೆದುಕೊಂಡು ಹೋಗಿದ್ದರು. ಬೇಸರ ಕಳೆಯಲು ಅಲ್ಲಿ ಅವರಿಗೆ ಅವಕಾಶ ಇತ್ತು. ಹಾಗೂ ಹೀಗೂ ಮೂರು ತಿಂಗಳು ಅಲ್ಲಿ ಕಳೆದು ಭಾರತಕ್ಕೆ ಮರಳಿದರು. ಇದೇ ವೇಳೆ ಸುಬ್ಬರಾಮು ಇಂಗ್ಲೆಂಡಿನಿಂದ ಬಂದು ಭೂಪಾಲಿನಲ್ಲಿ ಸಂಸಾರ ಹೂಡಿದ್ದರು.

ರಾಮು ಅಮೇರಿಕಾ ಪ್ರವಾಸ ಕೈಗೊಳ್ಳುವಂತೆ ತಂದೆಗೆ ಸೂಚಿಸಿದರು. ಆಗ ರಾಯರು ಅಮೇರಿಕೆಗೆ ಹೋಗಿ ಬಂದರು. ಈ ಪ್ರಯಾಣದ ಅನುಭವ ನಿರೂಪಣೆಯನ್ನು 'ಅಪರ ವಯಸ್ಕನ ಅಮೇರಿಕಾಯಾತ್ರೆ'ಯಲ್ಲಿ ನೀಡಿದ್ದಾರೆ. ಅಮೇರಿಕಾಕ್ಕೆ ಹೋದಾಗ ಅವರಿಗೆ ಎಪ್ಪತ್ತಮೂರು ವರ್ಷ ವಯಸ್ಸಾಗಿತ್ತು!

ಎಪ್ಪತ್ತರ ದಶಕದಲ್ಲಿ ತಮ್ಮ ಎರಡನೇ ಮಗ ರಾಜುವಿನ ಮೈಸೂರಿನ ಫಾರಂ ಹೌಸ್‌ನಲ್ಲಿ ಇದ್ದರು. ಬೇಸರವಾದಾಗ ಒಮ್ಮೊಮ್ಮೆ ಮಾನಸಗಂಗೋತ್ರಿಯ ಪ್ರಸಾರಂಗಕ್ಕೆ ಹೋಗುತ್ತಿದ್ದರು. ಇಲ್ಲಿ ನಿರ್ದೇಶಕರಾಗಿದ್ದ ಡಾ॥ ಪ್ರಭುಶಂಕರರವರ

ಪರಿಚಯವಾಯಿತು. ಜೊತೆಗೆ ಪು.ತಿ. ನರಸಿಂಹಾಚಾರ್, ಜಿ.ಆರ್. ಲಕ್ಷ್ಮಣರಾವ್, ಎಚ್.ಕೆ. ರಾಮಚಂದ್ರಮೂರ್ತಿ, ಎನ್. ಬಾಲಸುಬ್ರಹ್ಮಣ್ಯ, ಇವರೇ ಮುಂತಾದ ಮಹನೀಯರ ಸಹವಾಸ ದಿನೇ ದಿನೇ ಹೆಚ್ಚುತ್ತಾ ಹೋಯಿತು. ಪ್ರಸಾರಾಂಗಕ್ಕೆ ಆಗಾಗ್ಗೆ ಭೇಟಿ ನೀಡುತ್ತಿದ್ದುದರಿಂದ ಅವರೆಲ್ಲಾ ಆಪ್ತರಾಗಿದ್ದರು.

ಹಳೆಯ ಸ್ನೇಹಿತರಾಗಿದ್ದ ಎಲ್.ಎಸ್. ಶೇಷಗಿರಿರಾಯರು ಮೂರ್ತಿರಾಯರನ್ನು 'ಮೇಷ್ಟರು' ಎಂದೇ ಸಂಬೋಧಿಸುತ್ತಿದ್ದರು. ಇವರೆಲ್ಲರಿಗಿಂತ ಹೆಚ್ಚುಕಾಲ 'ಮೇಷ್ಟ್ರು' ಎಂದು ಕರೆದವರು ಮಹಾರಾಜ ಕಾಲೇಜಿನಲ್ಲಿ ಹಿಂದಿ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿ ಬೆಂಗಳೂರಿನಲ್ಲಿರುವ ಎನ್. ನಾಗಪ್ಪನವರು.

ನೈರೋಬಿಯ ಪ್ರವಾಸ

1977ರಲ್ಲಿ ಹಿರಿಯ ಮಗ ಸುಬ್ಬರಾಮು 'ಈಸ್ಟ್ ಆಫ್ರಿಕನ್ ಪವರ್ ಮತ್ತು ಲೈಟ್' ಕಂಪೆನಿಯ ಮುಖ್ಯ ಇಂಜಿನಿಯರಾಗಿ ಕೀನ್ಯಾದ ರಾಜಧಾನಿ ನೈರೋಬಿಯಲ್ಲಿ ಇದ್ದರು. ಆಗ ರಾಯರು ಮಗನ ಜೊತೆ ನೈರೋಬಿಯಲ್ಲಿ ಒಂದು ವರ್ಷಕಾಲ ಇದ್ದರು. ಅಲ್ಲಿಂದ ಅಮೇರಿಕೆಗೆ ಹೋಗಿ ಭಾರತಕ್ಕೆ ಮರಳಿದರು.

ಮೈಸೂರಿನಲ್ಲಿದ್ದ ಫಾರಂ ಹೌಸನ್ನು ಮಾರಿ ರಾಯರ ಎರಡನೇ ಮಗ ನಾಗರಾಜ್ ತೀರ್ಥಹಳ್ಳಿಯಲ್ಲಿ ನೆಲೆಸಿದ್ದರು. ಈ ಸಮಯದಲ್ಲಿ ಅವರು, ತನ್ನ ತಮ್ಮ 'ಮರಿ'ಯ (ಸೂರ್ಯನಾರಾಯಣ ರಾವ್) ಮನೆಯ ಕಾಂಪೌಂಡಿನಲ್ಲೇ ಇದ್ದ ಔಟ್‌ಹೌಸ್‌ನಲ್ಲಿ ಕೆಲಕಾಲ ಇದ್ದರು. 1984ರಲ್ಲಿ ಸುಬ್ಬರಾಮು ನೈರೋಬಿಯಿಂದ ದೆಹಲಿಗೆ ಬಂದನು. ನಂತರ ರಿಟೈರಾಗಿ ಮೈಸೂರಿಗೆ ಬಂದು ಮನೆಕಟ್ಟಿ, ಎರಡು ವರ್ಷಗಳಲ್ಲೆ ಬೆಂಗಳೂರಿನಲ್ಲೇ ಮನೆ ಮಾಡಬೇಕಾಯಿತು. ಇದಾದ ನಂತರ ಆ ಮಗನ ಜೊತೆಯಲ್ಲೇ ಉಳಿದ ಕಾಲ ಕಳೆದರು.

ದೇವರು ಎಂದರೇನು? 'ನಾವು ದೇವರನ್ನು ಹೇಗೆ ಕಲ್ಪಿಸಿಕೊಳ್ಳುತ್ತೇವೋ ಹಾಗೆ ಅದೇ ರೂಪದಲ್ಲೇ ಅವನು ಬಂದು ಸಲಹುತ್ತಾನೆ' ಎಂಬೆಲ್ಲಾ ಜನಸಾಮಾನ್ಯರ ಕಲ್ಪನೆಗಳನ್ನು ವೈಚಾರಿಕತೆಗೆ ಮೂರ್ತಿರಾಯರು ಗುರಿಪಡಿಸುತ್ತಾರೆ. ಅವರ ಮಾತಿನಂತೆ, "ಮೌಲ್ಯ ರಕ್ಷಕನಾದ, ಕರುಣಾದ್ರ ಹೃದಯನಾದ, ಪ್ರೇಮ ಸ್ವರೂಪನಾದ ದೇವರು ಬೇಕು. ನಾನು ದೇವರು ಇಲ್ಲ ಎಂದುಕೊಳ್ಳುವಾಗ ನನ್ನ ಮನಸ್ಸಿನಲ್ಲಿರುವುದು ಸಂತೋಷವಲ್ಲ... ಅದನ್ನು 'ವಿಷಾದ' ಎಂದೇ

ಅಕ್ಕಿಹೆಬ್ಬಾಳಿನ ನರಸಿಂಹ ಭವನದ ಉದ್ಘಾಟನೆ

ಪ್ರವಾಸದ ವೇಳೆ ಎಡತೊರೆಯಲ್ಲಿ

ಕರೆಯಬಹುದೇನೋ ಜೀವಕೋಟಿಯ ಸಂಕಟವನ್ನು ಪರಿಹರಿಸಬಲ್ಲ ದೇವರು – ಅಂಥ ದೇವರಿದ್ದರೆ ಯಾರು 'ಬೇಡ' ಎನ್ನುತ್ತಾರೆ?!''

''ಹೊಳೆ, ಮರ, ಶಾಲೆ, ಜನಗಳಂತೆ ದೇವಾಲಯವು ಒಂದು ಜೀವ. ಅದು ಸಾಮಾಜಿಕ ವ್ಯವಸ್ಥೆಯೊಂದರ ಫಲ. ಅದನ್ನು ನಾನೇಕೆ ವಿರೋಧಿಸಲಿ?''

''ವೇದಘೋಷವನ್ನು ಕೇಳಿ ಅದರ ನಾದ, ಲಯಗಳಿಂದ ಪುಳಕಿತನಾಗಿದ್ದೇನೆ. ನನ್ನ ತಮ್ಮಂದಿರು ಹಾಗೂ ಮಕ್ಕಳು ನನ್ನ ಹೆಂಡತಿಯನ್ನೇ ದೇವಿಯ ಸ್ಥಾನದಲ್ಲಿ ಕೂರಿಸಿ ನಿಜವಾಗಿ ಪೂಜೆ ಮಾಡಿದಾಗ ಅದರಲ್ಲಿ ಸಂಭ್ರಮದಿಂದ ಪಾಲುಗೊಂಡಿದ್ದೇನೆ. ನನ್ನ ದೃಷ್ಟಿಯಲ್ಲಿ ಜನಗಳೇ ದೇವರು; ಸದ್ಭಾವನೆಗಳೇ ದೇವರು. ವೈಷಮ್ಯ ರಹಿತ ಜೀವನದ ಹಾದಿ ತೋರಿಸುವವರೇ ದೇವರು. ಎದೆಯಲ್ಲಿ ಸ್ಥಾಪಿಸವಾಗದ ದೇವಾಲಯದ ಪೀಠಗಳಲ್ಲಿ ಮಾತ್ರ ಪ್ರತಿಷ್ಠಿತವಾಗುವ ದೇವರು ನನಗೆ ಬೇಕಾಗಿಲ್ಲ''

ಎನ್ನುವ ಮೂರ್ತಿರಾಯರು ಪ್ರಾಮಾಣಿಕವಾಗಿ ದೇವರಲ್ಲಿ ನಂಬಿಕೆ ಇಟ್ಟು ಒಳ್ಳೆಯ ಬದುಕನ್ನು ಬಾಳುವವರ ವಿಷಯದಲ್ಲಿ ಗೌರವವಿಟ್ಟವರು. ಪುಸ್ತಕದ ಕಡೆಯಲ್ಲಿ 'ಲೋಕ ಸೇವೆಯನ್ನು ಕುರಿತ ಶ್ರದ್ಧೆಯೇ ಮುಕ್ತಿ, ನಾವು ತಂದುಕೊಳ್ಳುವ ನಂಬಿಕೆ ಇಹಲೋಕವನ್ನು ಕುರಿತದ್ದು ಆಗಬೇಕು. ತಾಯಿ–ತಂದೆಯರು, ಹೆಂಡತಿ ಮಕ್ಕಳು, ಬಂಧುಗಳು ಸಹ ಮಾನವರು. ಇವರೆಲ್ಲರನ್ನೂ ಮತ್ತು ಅವರ ಬದುಕನ್ನು ಕುರಿತದ್ದೇ ಆಗಬೇಕು' ಎಂದು ದೃಢನಂಬಿಕೆಗಳನ್ನು ಕ್ರೋಡೀಕರಿಸುವರು.

ವಿಚಾರ ಸಾಹಿತ್ಯದಲ್ಲಿ ರಾಯರ ಅತ್ಯಂತ ಪ್ರಸಿದ್ಧ ಕೃತಿ 'ದೇವರು'. ಈ ಕೃತಿಗೆ 'ಪಂಪ ಪ್ರಶಸ್ತಿ' ದೊರಕಿತು.

'ಸಂಜೆಗಣ್ಣಿನ ಹಿನ್ನೋಟ' ಮೂರ್ತಿರಾಯರ ಆತ್ಮಕಥೆ. ಇದರ ಮುಖ್ಯವಸ್ತು ಬದುಕು ಅವರ ಕಣ್ಣಿಗೆ ಹೇಗೆ ಕಂಡಿತು; ಅವರೆದುರಿಗೆ ಕಾಲದಿಂದ ಕಾಲಕ್ಕೆ ಪರಿಸ್ಥಿತಿ ಹೇಗೆ ಬದಲಾಯಿತು; ಸಂಪ್ರದಾಯವೂ ಪಾಶ್ಚಾತ್ಯ ಮಾದರಿಯ ವಿದ್ಯಾಭ್ಯಾಸವೂ ಅವರ ಮೇಲೆ ಉಂಟುಮಾಡಿದ ಪರಿಣಾಮ, ಬಂಧುಗಳು, ಮಿತ್ರರು, ಗುರುಗಳು ಇವರ ಮೇಲೆ ಬೀರಿದ ಪ್ರಭಾವ; ಇವೆಲ್ಲವನ್ನೂ ಈ ಬರಹದಲ್ಲಿ ತಿಳಿಸಿದ್ದಾರೆ. ತಾವು ನಡೆದು ಬಂದ ದಾರಿಯನ್ನು ಗುರುತಿಸುತ್ತಲೇ ತಮ್ಮ ಸುತ್ತಲಿನ ಸಮಾಜದ ಸ್ವರೂಪವನ್ನೂ ಅದರಲ್ಲಿನ ಬೆಳವಣಿಗೆಗಳನ್ನೂ ನಿರೂಪಿಸಿ ವಿಶ್ಲೇಷಿಸಿದ್ದಾರೆ.

ವ್ಯಕ್ತಿತ್ವದ ಚಿತ್ರ, ಮಹತ್ವ

ಮೂರ್ತಿರಾಯರದ್ದು ಬಹಳ ಸರಳವಾದ ವ್ಯಕ್ತಿತ್ವ. ತುಂಬಾ ಸ್ನೇಹ ಸ್ವಭಾವ, ಚಿಂತನಶೀಲರು. ಅವರ ಸಂಭಾಷಣೆಯಲ್ಲಿ ಹಾಸ್ಯದ ಹೊಳಹುಗಳು ಇರುತ್ತಿದ್ದವು. ಅವರಿಗೆ ಸಂಗೀತದಲ್ಲಿ ಅಪಾರವಾದ ಆಸಕ್ತಿ ಇತ್ತು, ಅವರಿಗೆ ಪ್ರವಾಸ ಹೋಗುವುದರಲ್ಲಿ ತುಂಬಾ ಆಸಕ್ತಿ ಉತ್ಸಾಹ ಇತ್ತು

ಇವರು ಸಾಹಿತಿಯಾಗಿ ಹಲವು ಪ್ರಕಾರಗಳ ಕೃತಿಗಳನ್ನು ರಚಿಸಿದ್ದಾರೆ. ಲಲಿತ ಪ್ರಬಂಧ ಎನ್ನುವುದು ಮೂರ್ತಿರಾಯರಿಗೆ ಇನ್ನೊಂದು ಹೆಸರು. ಪ್ರಬಂಧಕಾರನ ಅನುಭವ ಮತ್ತು ವ್ಯಕ್ತಿತ್ವಗಳೇ ಲಲಿತ ಪ್ರಬಂಧಗದ ತಿರುಳು, ಜೀವ. ರಾಯರ ವ್ಯಕ್ತಿತ್ವ ಮತ್ತು ಶೈಲಿ ಲಲಿತ ಪ್ರಬಂಧಕ್ಕೆ ಹೇಳಿ ಮಾಡಿಸಿದಂತಿತ್ತು, ಗಂಭೀರ ಚಿಂತನೆಗೆ ಹಾಸ್ಯದ ಹೊಳಪು ಕೊಡಬಲ್ಲವರಾಗಿದ್ದರು. ಲವಲವಿಕೆಯ ಭಾಷೆ ಅವರದು.

ಮೂರ್ತಿರಾಯರ 'ಅಪರವಯಸ್ಕನ ಅಮೇರಿಕಾಯಾತ್ರೆ' ಕೃತಿಯಲ್ಲಿ ಒಂದು ಪ್ರಸಂಗ ನೆನಪಿಗೆ ಬರುತ್ತದೆ. ಇದೊಂದು ಪ್ರವಾಸ ಕಥನ.

''ದಕ್ಷಿಣ ಭಾರತದ ಸಾರಿನ ಕೀರ್ತಿಯನ್ನು ಕೇಳಿ ಅದಕ್ಕೆ ಸವಾಲಾಗಿ ಅಮೇರಿಕನ್ನರು 'ಮಷ್‌ರೂಂ ಸೂಪ್'ಅನ್ನು (Mushroom Soup) ತಯಾರಿಸಿದ್ದಾರೆ. ಮಷ್‌ರೂಂ ಸೂಪಿಗೆ ಮಷ್‌ರೂಂ ಹಾಕದಿದ್ದರೆ ಬಹಳ ಚೆನ್ನಾಗಿರುತ್ತದೆ. ನಮ್ಮ ಮೆಣಸಿನ ಸಾರಿನಂತೆ. ಆದರೆ ಸೈಕಲ್ ಟೈರಿನ ಚೂರುಗಳಂತೆ ಮಷ್‌ರೂಂ ಅದರಲ್ಲಿ ತೇಲುತ್ತಿದ್ದರೆ ಅಸಹ್ಯವಾಗುತ್ತದೆ. ಮಷ್‌ರೂಂ ಎಂದರೆ ಶಿಲೀಂಧ್ರ. ಅದಕ್ಕೆ ಕನ್ನಡಿಗರು ಕೊಟ್ಟಿರುವ ಹೆಸರು 'ನಾಯಿಕೊಡೆ'. ಎಷ್ಟಾದರೂ ನಮ್ಮ 'ಔಚಿತ್ಯ ಜ್ಞಾನ ಹೆಚ್ಚು' ಲಕ್ಷಣವಾಗಿ ಕನ್ನಡದಲ್ಲಿ 'ನಾಯಿಕೊಡೆ ಸಾರು' ಎಂದರೆ ಅದರ ಯೋಗ್ಯತೆ ಬಯಲಾಗುತ್ತದೆ.''

ಮೂರ್ತಿರಾಯರು ಸಂಗೀತಪ್ರಿಯರು. ಅವರ ಸಂಗೀತಕ್ಕೆ ಸಂಬಂಧಪಟ್ಟಂತೆ 'ಗಾನವಿಹಾರ' ಎಂಬ ಪುಸ್ತಕವನ್ನು ಬರೆದಿದ್ದಾರೆ. ಅವರ ಮಾತಿನಲ್ಲೇ ಹೇಳುವುದಾದರೆ – ''ಸಂಗೀತ ನನಗೆ ಕೊಟ್ಟಿರುವ ಆನಂದ ''ಮನಃಪ್ರಸಾದ'', ಅಳತೆಗೆ ಮೀರಿದ್ದು. ಸುಮಾರು ಎಂಟು ದಶಕಗಳ ಕಾಲ ಶಾಸ್ತ್ರೀಯ ಸಂಗೀತವನ್ನು ಕೇಳುತ್ತ ಬಂದಿದ್ದೇನೆ. ಆದರೂ ಆ ಕಲೆಯನ್ನು ಕುರಿತಂತೆ 'ಶಾಸ್ತ್ರೀಯ' ಎನ್ನಬಹುದಾದ ಜ್ಞಾನವನ್ನು ಸಂಪಾದಿಸಿದ್ದೇನೆಂದು ಹೇಳಲಾರೆ. ಅದಕ್ಕಾಗಿ

ಮತ್ತೊಂದು ಜನ್ಮ ಎತ್ತಬೇಕೆನಿಸುತ್ತಿದೆ - ನನಗೆ ಪುನರ್ಜನ್ಮದಲ್ಲಿ ನಂಬಿಕೆಯಿಲ್ಲವಾದರೂ.''

ಒಮ್ಮೆ ರಾಯರು ಮದರಾಸಿಗೆ ಹೋದ ಸಂದರ್ಭ. ಎಂ.ಡಿ. ರಾಮನಾಥನ್‌ರವರನ್ನು ಅವರ ಮನೆಯ ಬಳಿ ಅಕಸ್ಮಾತಾಗಿ ಹಾದುಹೋಗುತ್ತಿದ್ದಾಗ ನೋಡಿದರು. ಆಕಾಶವಾಣಿಯಲ್ಲಿ ನೋಡಿದ್ದ ನೆನಪಿನಿಂದ ಮೂರ್ತಿರಾಯರು ಅವರನ್ನು ಮಾತನಾಡಿಸಿದರು. ಪರಸ್ಪರ ಪರಿಚಯ, ಸಂವಾದ ಜರುಗಿದ ನಂತರ ಮೂರ್ತಿರಾಯರ ಸಂಗೀತ ಜ್ಞಾನವನ್ನು ಕಂಡು ರಾಮನಾಥನ್ ವಿಸ್ಮಿತರಾಗಿ ವಾದ್ಯಗಳ ನೆರವಿಲ್ಲದೆ ಎರಡು ಗಂಟೆಗೂ ಹೆಚ್ಚು ಕಾಲ ಹಾಡಿದರು. ಈ ಪ್ರಸಂಗವನ್ನು ಮೂರ್ತಿರಾಯರು ಪದೇ ಪದೇ ನೆನಪಿಸಿಕೊಳ್ಳುತ್ತಿದ್ದರು.

ಮತ್ತೊಮ್ಮೆ ಮೈಸೂರಿನಲ್ಲಿ ವೀಣೆ ಶೇಷಣ್ಣ ಸಂಗೀತ ಭವನ ಉದ್ಘಾಟನಾ ಸಮಾರಂಭಕ್ಕೆ ಮೂರ್ತಿರಾಯರನ್ನು ಆಹ್ವಾನಿಸಿದ್ದರು. ಆಗ ಶೇಷಣ್ಣನವರ ಮೊಮ್ಮಗ, ಮುತ್ತಾತನ ಬಗ್ಗೆ ಹೇಳಲು ಹೋದಾಗ ರಾಯರು 'ನಿನ್ನ ಮುತ್ತಾತನನ್ನು ನಾನು ಕಂಡಿದ್ದೇನೆ!' ಎಂದು ಹೇಳಿ ಶೇಷಣ್ಣನವರ ಸಂಗೀತವನ್ನು ಸವಿದ ದಿನಗಳನ್ನು ರಸವತ್ತಾಗಿ ವರ್ಣಿಸಿದರು. ಹೀಗೆ ಕರ್ನಾಟಕ ಸಂಗೀತದ ಬಗ್ಗೆ ಅವರಿಗೆ ಅತಿಯಾದ ಆಸಕ್ತಿ ಇತ್ತು

1963ರಲ್ಲಿ ರಾಜು(ಮಗ) FAOದ ತಜ್ಞನಾಗಿ ಫಿಲಿಪೀನ್ಸ್‌ಗೆ ಹೊರಡುವ ಮುನ್ನ ಹೆಂಡತಿಯನ್ನೂ, ಎರಡು ವರ್ಷದ ಮಗಳು ಕಮಲಳನ್ನೂ ಕರೆದುಕೊಂಡು ಬಂದು ಮೈಸೂರಿನಲ್ಲಿ ಎರಡು ವಾರ ಇದ್ದರು. ಮೂರ್ತಿರಾಯರು ಮತ್ತು ಜಯಮ್ಮ ಪ್ರೀತಿಯಿಂದ ಫಾರಿನ್ ಸೊಸೆಯನ್ನು ಬರಮಾಡಿಕೊಂಡಿದ್ದರು.

ರಾಜು ಬಂದಿದ್ದ ಈ ಸಂದರ್ಭದಲ್ಲಿ ಗೌರಿಹಬ್ಬ ಬಂದಿತು. ಆಗ ಸೊಸೆ ನ್ಯಾನ್ಸಿ ಕೂಡ ಎಲ್ಲರಂತೆ ತಲೆ ಬಾಚಿಕೊಂಡು, ಹಣೆಗೆ ಕುಂಕುಮ ಇಟ್ಟುಕೊಂಡು, ಅತ್ತೆಯವರು ಹೇಳಿದಂತೆ ಅಕೆಯ ಮಗ್ಗುಲಲ್ಲೇ ಕುಳಿತು ಗೌರಿಪೂಜೆ ಮಾಡಿದಳು.

ಈ ದೃಶ್ಯ ನೋಡಿ ಮೂರ್ತಿರಾಯರಿಗೆ ಕಣ್ಣಲ್ಲಿ ನೀರು ಬಂದಿತ್ತು, ಕ್ರೈಸ್ತ ಮತದವಳು ಪೂಜೆ ಮಾಡುವುದೊಂದಾದರೆ, ತಮ್ಮ ಹೆಂಡತಿಯ ಹೃದಯ ವೈಶಾಲ್ಯತೆ ನೋಡಿ ರಾಯರಿಗೆ ಹೃದಯ ತುಂಬಿ ಬಂದಿತ್ತು, ಇದೊಂದು ಅವರ ಜೀವನದಲ್ಲಿ ಮರೆಯಲಾಗದ ಪ್ರಸಂಗ.

ಮೂರ್ತಿರಾಯರಿಗೆ ಪ್ರವಾಸಗಳಲ್ಲಿ ಬಹಳ ಆಸಕ್ತಿ, ಕಾರ್ಯನಿಮಿತ್ತ ಹೊರ ಊರುಗಳ ವಾಸ್ತವ್ಯ ಆಗ್ಗಿಂದಾಗ್ಗೆ ಇರುತ್ತಿದ್ದವು. ಸ್ನೇಹಿತರ ಮನೆಗಳಲ್ಲಿ ಊರುಗಳಲ್ಲಿ ಅವರ ಜೊತೆ ಹಲವಾರು ದಿನಗಳ ಕಾಲ ಇದ್ದದ್ದುಂಟು. ಕುವೆಂಪುರವರ ಜೊತೆ ಕುಪ್ಪಳ್ಳಿಯಲ್ಲಿದ್ದ ನೆನಪುಗಳನ್ನು ಆಗಾಗ್ಗೆ ಮಾಡಿಕೊಳ್ಳುತ್ತಿದ್ದರು. ಜಯಮ್ಮನವರೊಡನೆ ಹರಿದ್ವಾರ ಮೊದಲಾದ ತೀರ್ಥಕ್ಷೇತ್ರಗಳಿಗೆ ಹೋಗಿ ಬಂದದ್ದನ್ನೂ ಸ್ವಾರಸ್ಯವಾಗಿ ವರ್ಣಿಸುತ್ತಿದ್ದರು.

ಅವರ ನೂರನೇ ವರ್ಷದಲ್ಲೂ ಒಮ್ಮೆ ಅಕ್ಕಿ ಹೆಬ್ಬಾಳು, ಚುಂಚನಕಟ್ಟೆ, ಹೇಮಗಿರಿ ಮುಂತಾದ ಅವರು ಬಾಲ್ಯದಲ್ಲಿ ಓಡಾಡಿದ್ದ ಜಾಗಗಳಿಗೆ ಹೋಗಿಬರಲು ಅಪೇಕ್ಷೆಪಟ್ಟರು. ಅವರ ತಮ್ಮ 'ಮರಿ'ಯ ಬೀಗರು ವೆಂಕಟರಾಮಶಾಸ್ತ್ರಿ, ಜಯಲಕ್ಷಮ್ಮನವರ ಯಡತೊರೆಯ ಮನೆಯಲ್ಲಿ ಎರಡು ಮೂರು ದಿನ ಇದ್ದು ಲವಲವಿಕೆಯಿಂದ ಅವರು ನೋಡಬೇಕೆಂದಿದ್ದ ಸ್ಥಳಗಳನ್ನೆಲ್ಲಾ ನೋಡಿ ಸಂತೋಷಪಟ್ಟರು.

ಅಕ್ಕಿಹೆಬ್ಬಾಳಿನ ಜನ ರಾಯರ ಬಗ್ಗೆ ಗೌರವ ಸೂಚಿಸಲು ಮತ್ತು ಅವರ ನೆನಪು ಶಾಶ್ವತವಾಗಿರಲೆಂಬ ಉದ್ದೇಶದಿಂದ ಮೂರ್ತಿಭವನವೆಂಬ ಕಟ್ಟಡ ನಿರ್ಮಿಸಲು ಉದ್ದೇಶಿಸಿದರು. ಮೂರ್ತಿಭವನ ಎಂಬುದರ ಬದಲು ನರಸಿಂಹ ಭವನವೆಂಬ ಹೆಸರು ಸೂಚಿಸಿದ ಮೂರ್ತಿರಾಯರು ಆ ಕಟ್ಟಡದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅಕ್ಕಿಹೆಬ್ಬಾಳಿಗೆ ಬಂದವರಿಗೆ ತಂಗಲು ನರಸಿಂಹಭವನ ಅನುಕೂಲವಾಗಿದೆ.

ಹೊಯ್ಸಳ ಕರ್ನಾಟಕದ ವಿಶೇಷ ಅಡುಗೆಗಳಾದ ತೊಗರಿ ನುಚ್ಚಿನ ಉಂಡೆ, ಉದ್ದಿನ ಕಡುಬು, ಕಾಯಿ ಕಡಬು, ಆಂಬೊಡೆ – ಇವುಗಳನ್ನು ಮೂರ್ತಿರಾಯರು ಇಷ್ಟಪಡುತ್ತಿದ್ದರು. ಕಾಯಿ ಒಬ್ಬಟ್ಟು ಕಂಡುಹಿಡಿದವರಿಗೆ ನೋಬೆಲ್ ಪ್ರಶಸ್ತಿ ಕೊಡಬೇಕೆಂದು ಹೇಳುತ್ತಿದ್ದರು. ಕ್ಯಾಡ್‌ಬರೀಸ್ ಚಾಕೋಲೇಟ್ ತುಂಬಾ ಇಷ್ಟ.

ಮೂರ್ತಿರಾಯರು ದೀರ್ಘಕಾಲ ಬದುಕಿದ ರೀತಿಯ ರಹಸ್ಯವನ್ನು ಪ್ರಾತ್ಯಕ್ಷಿಕೆಯಿಂದ ಬಿಡಿಸುತ್ತಿದ್ದರು. ಮಿತಾಹಾರ, ತಿನ್ನುವ ಆಹಾರವನ್ನು ಪ್ರೀತಿಸುವುದು. ಪ್ರತಿನಿದ 4–5 ಕಿ.ಮೀ. ವಾಯುವಿಹಾರ ಮಾಡುತ್ತಿದ್ದರು. ತಮ್ಮ ಕೊನೆಯವರೆಗೂ ಗಟ್ಟಿಮುಟ್ಟಾಗಿದ್ದರು.

103ರ ಇಳಿವಯಸ್ಸಿನಲ್ಲೂ ಲವಲವಿಕೆಯಿಂದ ಇದ್ದರು. ಯಾವುದೇ ಅನಾರೋಗ್ಯ ಅವರನ್ನು ಕಾಡಿರಲಿಲ್ಲ, ಆಗಸ್ಟ್ 3, 2003ರಂದು ಬೆಳಿಗ್ಗೆ ವಾಯು ವಿಹಾರಕ್ಕೆ ಹೋಗುತ್ತಿದ್ದಾಗ, ಬೀದಿನಾಯಿಗಳು ಜಗಳವಾಡುತ್ತ ಮೂರ್ತಿರಾಯರತ್ತ ಎರಗಿದವು. ಆಯತಪ್ಪಿ ಉರುಳಿ ಅವರ ತೊಡೆಯ ಮೂಳೆ ಮುರಿಯಿತು. ಶಸ್ತ್ರಚಿಕಿತ್ಸೆ ನಂತರ ಆಗಸ್ಟ್ 15ರಂದು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದರು. ಆಗಸ್ಟ್ 23ರಂದು ಸಂಜೆ 'ಯಾಕೋ ಮೈ-ಕೈ ನೋಯುತ್ತಿದೆ' ಎಂದು ಹೇಳಿ ಮಲಗಿದರು. ಸಾವು ಮೂರ್ತಿರಾಯರನ್ನು ನಿರಾಯಾಸವಾಗಿ ಬರಮಾಡಿಕೊಂಡಿತು. ಈ ಶತಮಾನದ ನಮ್ಮ ನಾಡಿದ ಅದ್ಭುತ ಚೇತನ ನಮ್ಮಿಂದ ಮರೆಯಾಯಿತು.

ವೃತ್ತಿ:

1. ಮೈಸೂರು ಮಹಾರಾಜ ಹೈಸ್ಕೂಲಿನ ಉಪಾಧ್ಯಾಯರು : 1925–1927.
2. ಮೈಸೂರು ಮಹಾರಾಜ ಕಾಲೇಜಿನ ಅಧ್ಯಾಪಕರು: 1927–1940.
3. ಶಿವಮೊಗ್ಗ ಇಂಟರ್ಮೀಡಿಯಟ್ ಕಾಲೇಜಿನಲ್ಲಿ ಉಪಪ್ರಾಧ್ಯಾಪಕರು: 1940–1943.
4. ಮೈಸೂರು ಆಕಾಶವಾಣಿ ಕೇಂದ್ರದ ಉಪನಿರ್ದೇಶಕರು: 1943–1947.
5. ಚಿತ್ರದುರ್ಗ ಇಂಟರ್ಮೀಡಿಯಟ್ ಕಾಲೇಜಿನ ಸೂಪರಿಂಟೆಂಡೆಂಟರು: 1948–1949.
6. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಾಧ್ಯಾಪಕರು: 1949–1955. 1955ರಲ್ಲಿ ನಿವೃತ್ತಿ
7. ಕರ್ನಾಟಕ ರಾಜ್ಯ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ನಿರ್ದೇಶಕರು 1956–1959.

ಸಂಘ-ಸಂಸ್ಥೆಗಳಲ್ಲಿ:

1. ಗೌರವ ಕಾರ್ಯದರ್ಶಿಗಳು, ಕನ್ನಡ ಸಾಹಿತ್ಯ ಪರಿಷತ್ತು : 1954.
2. ಗೌರವ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು: 1954–1956.
3. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿಯ ಅಧ್ಯಕ್ಷರು ಮತ್ತು ಸಂಚಾಲಕರು.
4. ದಕ್ಷಿಣ ಭಾಷೆಗಳ ಬುಕ್ ಟ್ರಸ್ಟ್‌ನ ಕನ್ನಡ ಸಮಿತಿ ಅಧ್ಯಕ್ಷರು ಮತ್ತು ಸಂಚಾಲಕರು.
5. ಆಲ್ ಇಂಡಿಯ ರೇಡಿಯೋ ಕೇಂದ್ರ ಸಲಹಾ ಸಮಿತಿಯ ಅಧ್ಯಕ್ಷರು.

ಗೌರವಗಳು, ಪ್ರಶಸ್ತಿಗಳು

1. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
2. ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್.
3. 'ಅಪರ ವಯಸ್ಕನ ಅಮೆರಿಕಾ ಯಾತ್ರೆಗೆ' ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.
4. 'ಚಿತ್ರಗಳು–ಪತ್ರಗಳು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ.
5. 'ಚಂಡ ಮಾರುತ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ.
6. ಕೈವಾರದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು (1984).
7. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
8. 'ದೇವರು' ಕೃತಿಗೆ ಪಂಪ ಪ್ರಶಸ್ತಿ
9. ಭಾರತೀಯ ವಿದ್ಯಾಭವನದ ಗೌರವ ಸದಸ್ಯತ್ವ.

ಕೃತಿಗಳು

ಲಲಿತ ಪ್ರಬಂಧ

ಹಗಲುಗನಸುಗಳು

ಅಲೆಯುವ ಮನ

ಮಿನುಗು ಮಿಂಚು

ಸಾಹಿತ್ಯ ಮೀಮಾಂಸೆ ಮತ್ತು ವಿಮರ್ಶೆ

ಷೇಕ್ಸ್‌ಪಿಯರ್ (ಪೂರ್ವಭಾಗ)

ಮಾಸ್ತಿಯವರ ಕಥೆಗಳು

ಬಿ.ಎಂ. ಶ್ರೀಕಂಠಯ್ಯ

ಪೂರ್ವಸೂರಿಗಳೊಡನೆ

ಸಾಹಿತ್ಯ ಮತ್ತು ಸತ್ಯ

ವಿಮರ್ಶಾತ್ಮಕ ಪ್ರಬಂಧಗಳು

ಆತ್ಮ ಚರಿತ್ರೆ

ಸಂಜೆಗಣ್ಣಿನ ಹಿನ್ನೋಟ

ಪ್ರವಾಸ ಸಾಹಿತ್ಯ

ಅಪರ ವಯಸ್ಕನ ಅಮೆರಿಕ ಯಾತ್ರೆ

ವಿಚಾರ ಸಾಹಿತ್ಯ

ದೇವರು

ಸಂಕೀರ್ಣ

ಚಿತ್ರಗಳು–ಪತ್ರಗಳು

ಜನತಾ ಜನಾರ್ದನ

ರೂಪಾಂತರ, ಅನುವಾದ

ಆಷಾಢಭೂತಿ

ಸಾಕ್ರೆಟೀಸನ ಕೊನೆಯ ದಿನಗಳು

ಹವಳದ ದ್ವೀಪ

ಯೋಧನ ಪುನರಾಗಮನ

ಪಾಶ್ಚಾತ್ಯ ಸಣ್ಣ ಕಥೆಗಳು

ಅಮೆರಿಕನ್ ಸಾಹಿತ್ಯ

ಮೋಲಿಯೇರನ ಎರಡು ನಾಟಕಗಳು

ಇಂಡಿಯಾ, ಇಂದು ಮತ್ತು ನಾಳೆ

In English

The Return to the Soil *(Translation of Dr. Shivaram Karanth's Kannada novel Marali Mannige).*

B.M. Srikantaiah.

Musings on Men and Matters.

ಹೊಯ್ಸಳ ಮಾಲೆ



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಂಗಳೂರು - 560 027
ಫೋನ್ : +91-80-2227 4411

ಹೊಯ್ಸಳ ಮಾಲೆ

ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.

ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ, ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.

ಪುಸ್ತಕಗಳು ದೊರೆಯುವ ಸ್ಥಳ

ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡ ರಸ್ತೆ, ಹೊಂಬೇಗೌಡನಗರ,
ಬೆಂಗಳೂರು-560 027
ಫೋನ್: 080-2227 4411

ಹೊಯ್ಸಳ ಕರ್ನಾಟಕ ಸಂಘ (ರಿ.)
888, ನಾರಾಯಣಶಾಸ್ತ್ರಿ ರಸ್ತೆ, ಲಕ್ಷ್ಮಿಪುರಂ,
ಮೈಸೂರು-570 008.
ಫೋನ್: 0821-2330995

ಹೊಯ್ಸಳ ಕರ್ನಾಟಕ ಸಂಘ (ರಿ.)
309, ಎಲ್.ಐ.ಜಿ. 21ನೇ ಅಡ್ಡ ರಸ್ತೆ,
ಕುವೆಂಪುನಗರ, ಹಾಸನ-573 201
ಫೋನ್: 08172-268848